



ಗ್ಲ್ಯಾಮರ್‌ಗೆ ಒತ್ತು ನೀಡುವ ಹೆಂಗಳೆಯರು ಹಬ್ಬದ ಸಂದರ್ಭದಲ್ಲಿ ಎಥ್ನಿಕ್ ಉಡುಪುಗಳ ಮೊರೆ ಹೋಗುತ್ತಾರೆ. ಬಟ್ಟೆ, ಬಣ್ಣ, ಸ್ಟೈಲ್, ಗ್ಲ್ಯಾಮರ್ ಲೆಕ್ಕಾಚಾರಗಳೇನೇ ಇದ್ದರೂ ಫ್ಯಾಷನಬಲ್ ಸಲ್ವಾರ್, ಸೀರೆಗಳತ್ತ ಚಿತ್ತ ಹರಿಸುವುದು ಒಳ್ಳೆಯ ಬೆಳವಣಿಗೆ' ಎನ್ನುತ್ತಾರೆ ಬೆಂಗಳೂರಿನ ವಸ್ತ್ರವಿನ್ಯಾಸಕಿ ಶುಭದಾ ಶೆಟ್ಟಿ.

## ಬಹುವರ್ಣದ ಸೀರೆ

ಸೀರೆಗಳಲ್ಲೂ ಬಹುವರ್ಣದ ಸೀರೆಗಳು ನವರಾತ್ರಿಗಾಗಿಯೇ ಇರುವಂಥವು. ಫ್ಯಾಷನಬಲ್ ಆಗಿರುವ ಬಹು ವರ್ಣದ ಸೀರೆಗಳು ವಿವಿಧ ವಿನ್ಯಾಸಗಳಲ್ಲಿದ್ದರೆ, ಒಂದೇ ಸೀರೆಯಲ್ಲಿ ಹಲವು ಬಣ್ಣಗಳಿಂದ ಕೂಡಿದವು ಇಂದಿನ ಫ್ಯಾಷನ್‌ಗೆ ತಕ್ಕಂತೆ ಇದೆ. ಇಂಥ ನವರಂಗ್ ಸೀರೆಗಳಿಗೆ ವಯೋಮಾನದ ಹಂಗಿಲ್ಲ. ಪುಟ್ಟ ಹುಡುಗಿಯಿಂದ ಹಿಡಿದು ಮುದುಕಿಯರವರೆಗೆ ಎಲ್ಲರೂ ಆರಾಮವಾಗಿ ಉಟ್ಟುಕೊಳ್ಳಬಹುದು. ಹೀಗಾಗಿ ಇಂಥ ಉಡುಪುಗಳಿಗೆ ಬೇಡಿಕೆಯೂ ಹೆಚ್ಚುತ್ತಿದೆ.

'ನವರಂಗ್ ಉಡುಪುಗಳು ಸಂಪ್ರದಾಯದ ಮಿತಿಯೊಳಗೆ ಫ್ಯಾಷನ್‌ನ ಪರಿಧಿಯನ್ನೂ ಮುಟ್ಟುವ ಗುಣ ಹೊಂದಿರುವುದು ಈ ಬಗೆಯ ಉಡುಗೆ ಇಂದು ಹೆಚ್ಚು ಹೆಚ್ಚು ಜನಪ್ರಿಯಗೊಳ್ಳಲು ಕಾರಣ. ಒಮ್ಮೆ ಕೊಂಡುಕೊಂಡರೆ ಹಬ್ಬ ಮಾತ್ರವಲ್ಲದೆ ಮದುವೆ, ಮುಂಜಿಗಳಂತಹ ಶುಭ ಕಾರ್ಯಗಳಿಗೂ ಈ ಸೀರೆ ಗ್ರ್ಯಾಂಡ್ ಲುಕ್ ಅನ್ನೇ ಕೊಡುತ್ತದೆ. ಹೀಗಾಗಿ ನವರಾತ್ರಿಗೆಂದೇ ವಿನ್ಯಾಸಗೊಳಿಸಲಾದ ಸೀರೆಗಳು ಹೆಚ್ಚುಹೆಚ್ಚು ಮಾರಾಟವಾಗುತ್ತವೆ' ಎಂದು ವಿವರ ನೀಡುತ್ತಾರೆ ಶುಭದಾ.

'ಸೀರೆ ಯಾವತ್ತೂ ಕಾಲಕ್ಕೆ ತಕ್ಕಂತೆ, ಟ್ರೆಂಡ್‌ಗೆ ಸೂಕ್ತವಾದಂತೆ ಫ್ಯಾಷನಬಲ್ ಆಗಿರಬೇಕು. ಹೇಗೆ ಬ್ರೈಡಲ್ ವೇರ್ ವಧುವಿನ ವ್ಯಕ್ತಿತ್ವವನ್ನು ಪ್ರತಿಬಿಂಬಿಸುವಂತಿರುವುದೋ ಅದೇ ರೀತಿ ನವರಂಗ್ ಸೀರೆಗಳು ಮಹಿಳೆಯ ವ್ಯಕ್ತಿತ್ವವನ್ನು ಅನಾವರಣಗೊಳಿಸುವಂತಿರಬೇಕು. ಜೊತೆಗೆ ಕ್ರೇಪ್ ಶೈಲಿಯ ಲೆಹಂಗಾ, ಸೀಕ್ವೆನ್ಸ್ ಕಲರ್‌ನ ಉಡುಪು, ರೇಷ್ಮೆ ಸೀರೆಯಲ್ಲಿ ಬುಟ್ಟಾ ಡಿಸೈನ್, ಕಲರ್ ಕಾಂಬಿನೇಷನ್ ಇಂದಿನ ಟ್ರೆಂಡ್‌ಗೆ ತಕ್ಕಂತಿದ್ದರೆ ಮಹಿಳೆ ಇನ್ನೂ ಹೆಚ್ಚು ಸೌಂದರ್ಯಯುತವಾಗಿ ಕಾಣಲು ಸಾಧ್ಯವಾಗುತ್ತದೆ' ಎಂಬುದು ಈ ವಸ್ತ್ರ ವಿನ್ಯಾಸಕಿಯ ನಿಲುವು.

ಉಡುಪಿಗೆ ತಕ್ಕಂತಹ ಒಡವೆ ಹಾಗೂ ಇತರ ಆ್ಯಕ್ಸೆಸರೀಸ್ ಕೂಡ ಸೌಂದರ್ಯ ಹೆಚ್ಚಿಸಲು ಸಹಕಾರಿ. ಚಿನ್ನದ ಒಡವೆಯೇ ಆಗಬೇಕಿಲ್ಲ. ಇಮಿಟೇಷನ್ ಜ್ಯುವೆಲ್ಲರಿ, ಕುಂದನ್, ಪೋಲ್ಕಾ, ಹರಳುಗಳು, ಮಣಿಮಾಲೆಗಳು, ಕಾಸಿನ ಸರ, ಒಂದೇ ಒಂದು ನೆಕ್‌ಪೀಸ್ ಕೂಡ ಹಬ್ಬದ ಉಡುಗೆಗೆ ಮ್ಯಾಚ್ ಆಗುತ್ತದೆ. ಹಬ್ಬದ ಸಂದರ್ಭದಲ್ಲಿ ಬಣ್ಣಬಣ್ಣದ ಸೀರೆ, ಸಲ್ವಾರ್, ಲೆಹಂಗಾ, ಟಾಪ್ ತೊಟ್ಟು ಸಂಭ್ರಮಿಸುವ ಸಡಗರಕ್ಕೆ ವೈರಾಣು ತಲ್ಲಣ ಅಡ್ಡಿಯಾಗದಿರಲಿ.